**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

**(ಪ್ರಾ.ಸಾ.2 / ಚಾ.ಸಾ.5)**

ತಾಃ 08-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಭರತೇಶ್

ತಂದೆಯ ಹೆಸರು ಃ ರಾಮಪ್ಪ
ವಯಸ್ಸು ಃ 37 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ಚಿಕ್ಕಕೊಂಡನಹಳ್ಳಿ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿಲ್ಲ. ಹಿಂಡಿಗನಾಳ ಕ್ರಾಸ್ ನಮ್ಮ ಊರ ಹತ್ತಿರ ಇದೆ. ಕವಿತಾಳ ಡಾಬಾ ಸಹ ಹೆಚ್ ಕ್ರಾಸ್ ಹತ್ತಿರ ಇದೆ. ಚಾಸಾ-1 ಮತ್ತು 6 ರ ಪರಿಚಯ ಇರುವುದಿಲ್ಲ. ಮೃತ ಕವಿತಾಳ ಪರಿಚಯ ಇಲ್ಲ. ಚಾಸಾ-2 ಮತ್ತು 8 ರವರ ಪರಿಚಯ ಇರುವುದಿಲ್ಲ. ಕವಿತಾ ಏನು ಆಗಿದ್ದಾಳೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಮೇಲೆ ಯಾವ ಪ್ರಕರಣ ಇದೆ ಗೊತ್ತಿಲ್ಲ. ನಂದಗುಡಿ ಪೋಲಿಸರು ಈ ಪ್ರಕರಣದ ಬಗ್ಗೆ ವಿಚಾರಿಸಿರುವುದಿಲ್ಲ ಹಾಗೂ ಹೇಳಿಕೆಯನ್ನು ಪಡೆದಿಲ್ಲ. ಪ್ರಕರಣದ ಕುರಿತು ಮಾಹಿತಿ ಇಲ್ಲ. ಪೋಲಿಸರು ಬಂದು ನೋಟೀಸ್ ನೀಡಿದ್ದಕ್ಕೆ ಬಂದಿದ್ದೇನೆ. ಯಾವುದೇ ವಿಚಾರವನ್ನು ಪೋಲಿಸರು ಹೇಳಿಲ್ಲ ನಾನು ಕೇಳಿ ತಿಳಿದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಕಲಂ.161 ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 17-11-2017 ರಂದು ಸಾಯಂಕಾಲ 6-25 ಗಂಟೆ ಸಮಯದಲ್ಲಿ ನನ್ನ ಮೋಟಾರ್ ಸೈಕಲ್‌ನಲ್ಲಿ ಊರಿನಿಂದ ಹೆಚ್ ಕ್ರಾಸ್‌ನಿಂದ ಸಾಮಾನುಗಳನ್ನು ತೆಗೆದುಕೊಂಡು ಕವಿತಾ ಡಾಬಾದ ಬಳಿ ಹೋಗುತ್ತಿದ್ದಾಗ ಡಾಬಾದ ಮುಂದಿನ ಬೋಡ್ ಹೊಡಿದಿತ್ತು , ಲೈಟುಗಳು ಆಫ್ ಆಗಿತ್ತು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಮಧ್ಯಾಹ್ನನ ಅವಧಿ ಮುಗಿದಿದ್ದರಿಂದ ಸರ್ಕಾರಿ ಅಭಿಯೋಜಕರು ಮುಂದುವರೆದ ಪಾಟೀ-ಸವಾಲಿಗೆ ಕಾಲವಕಾಶವನ್ನು ಕೇಳುತ್ತಿದ್ದಾರೆ. ಕಾಲವಕಾಶವನ್ನು ನೀಡಿ ಮುಂದೂಡಲಾಯಿತು.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.